ಶ್ರೀ ವಿದುರಾಶ್ವತ ದೇವಾಲಯದ ಅಭಿವೃದ್ಧಿ

2439 (2082) **ಶ್ರೀ ಎನ್.ಹೆಚ್. ಶಿವಶಂಕರ ರೆಡ್ಡಿ** (ಗೌರಿಬಿದನೂರು) :— ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಕೋಲಾರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನ ಶ್ರೀ ವಿದುರಾಶ್ವತ ದೇವಾಲಯದ ಅಭಿವೃದ್ಧಿಯ ಕಾರ್ಯಗಳಿಗಾಗಿ ಈ ಸಾಲಿನಲ್ಲಿ ಬಿಡುಗಡೆಗೊಂಡ ಅನುದಾನವೆಷ್ಟು?

2. ಬಿಡುಗಡೆಗೊಂಡ ಅನುದಾನವನ್ನು ಯಾವ ಯಾವ ಅಭಿವೃದ್ಧಿಯ ಕಾರ್ಯಗಳಿಗೆ ವಿನಿಯೋಗಿಸಲಾಗಿದೆ? (ವಿವರವಾರು ನೀಡುವುದು)

3. ಈ ದೇವಾಲಯದ ಅಭಿವೃದ್ಧಿಯ ಕಾರ್ಯಗಳನ್ನು ಪ್ರಗತಿಪಥದಲ್ಲಿ ನಡೆಸಲು ಧರ್ಮದರ್ಶಿ ಮಂಡಳಿಯ ಸದಸ್ಯರನ್ನು ನೇಮಿಸಲಾಗಿದೆಯೇ?

4. ಈ ದೇವಾಲಯದಿಂದ ಸರ್ಕಾರಕ್ಕೆ ಪ್ರತಿ ವರ್ಷ ಬರುವ ಆದಾಯವೆಷ್ಟು? ಹಾಗೂ ದೇವಾಲಯದ ಅಭಿವೃದ್ಧಿಗಾಗಿ ಖರ್ಚು ಮಾಡುವ ಆದಾಯವೆಷ್ಟು? (ವಿವರವಾರು ನೀಡುವುದು)

5. ಈ ದೇವಾಲಯದ ಸಂಪೂರ್ಣ ಅಭಿವೃದ್ಧಿಗೆ ಸರ್ಕಾರವು ವಿಶೇಷ ಅನುದಾನದಲ್ಲಿ ಅನುದಾನವನ್ನು ಮಂಜೂರು ಮಾಡಿ ಇಲ್ಲಿನ ಭಕ್ತಾದಿಗಳಿಗೆ ಉತ್ತಮ ರೀತಿಯ ಸೌಲಭ್ಯವನ್ನು ಎಂದು ಕಲ್ಪಿಸಿಕೊಡಲಾಗುವುದು?

ಶ್ರೀ ಬಾಬುರಾವ್ ಚಿಂಚನಸೂರು (ಮುಜರಾಯಿ ಸಚಿವರು) :—

1. ಈ ದೇವಲಯಕ್ಕೆ ಈ ಸಾಲಿನಲ್ಲಿ ಅನುದಾನ ಮಂಜೂರಾಗಿರುವುದಿಲ್ಲ.

2. ಪ್ರಶ್ನೆ ಉದ್ಭವಿಸುವುದಿಲ್ಲ.

3. ಸದ್ಯಕ್ಕೆ ಸಹಾಯಕ ಕಮಿಷನರ್, ಚಿಕ್ಕಬಳ್ಳಾಪುರ ಉಪವಿಭಾಗದವರನ್ನು ಆಡಳಿತಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ.

4. ಸದರಿ ದೇವಾಲಯಕ್ಕೆ ಸುಮಾರು ರೂ.7.00 ಲಕ್ಷಗಳ ವಾರ್ಷಿಕ ಆದಾಯವಿರುತ್ತದೆ. ಈ ಆದಾಯದಲ್ಲಿ ಅರ್ಚಕರ ಮತ್ತು ಸಿಬ್ಬಂದಿ ವೇತನ, ಹೆಚ್ಚುಕಟ್ಟಿ, ನಿತ್ಯಕಟ್ಟಿ, ರಥೋತ್ಸವ ಇತ್ಯಾದಿಗಳಿಗೆ ವಾರ್ಷಿಕ ಸುಮಾರು ರೂ.3.00 ಲಕ್ಷ ವೆಚ್ಚವಾಗುತ್ತಿದ್ದು, ಉಳಿದ ಮೊತ್ತ ದೇವಾಲಯದ ಖಾತೆಯಲ್ಲಿರುತ್ತದೆ. ದೇವಾಲಯದ ಅಭಿವೃದ್ಧಿ ಕಾಮಗಾರಿಗಳ ಅವಶ್ಯಕತೆ ಕಂಡುಬಂದ ಸಂದರ್ಭದಲ್ಲಿ ನಿಯಮಾನುಸಾರ ವೆಚ್ಚ ಮಾಡಲಾಗುತ್ತದೆ.

5. ಸ್ಥಳೀಯ ಭಕ್ತಾದಿಗಳು ಮತ್ತು ಸಾರ್ವಜನಿಕರು ಮುಂದೆ ಬಂದು ಸದರಿ ದೇವಾಲಯದ ಅಭಿವೃದ್ಧಿ ಬಗ್ಗೆ ನಿಯಮಾನುಸಾರ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರದ ಅನುದಾನ ಕೋರಿ ಸಲ್ಲಿಸಿದಲ್ಲಿ ಇದನ್ನು ಪರಿಶೀಲಿಸಲಾಗುವುದು.

ಗೌರಿಬಿದನೂರು ತಾಲ್ಲೂಕಿನಲ್ಲಿ ಸೇಂದಿ ಮೀಸಲು ಪ್ರದೇಶ

2440 (2906) ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ಶೇಂದಿ ಮೀಸಲು ಪ್ರದೇಶದ (ರಾಜ್ಯ ಮತ್ತು ಕೇಂದ್ರ) ವಿಸ್ತೀರ್ಣ ಎಷ್ಟು? ಸದರಿ ವಿಸ್ತೀರ್ಣ ಎಷ್ಟು?

ಸದರಿ ವಿಸ್ತೀರ್ಣದಲ್ಲಿ ರೈತರು ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಬಗ್ಗೆ ಸರ್ಕಾರದ ಮಾಹಿತಿ ಇದೆಯೇ?

ಆ) ಸದರಿ ಪ್ರದೇಶಗಳಲ್ಲಿ ಅಕ್ರಮ ಸಾಗುವಳಿಯನ್ನು ಸಕ್ರಮ ಮಾಡುವ ಬಗ್ಗೆ ಸರ್ಕಾರದಲ್ಲಿ ಪ್ರಸ್ತಾವನೆ ಇದೆಯೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :—

ಅ) 1357 ಎಕರೆ 20 ಗುಂಟೆ

-ಇದೆ-

ಆ) ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆ.

ಗೌರಿಬಿದನೂರು ತಾಲ್ಲೂಕಿನಲ್ಲಿ ಜಲಾನಯನ ಅಭಿವೃದ್ಧಿ ಯೋಜನೆ

2441(2906) ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) :— ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ಇಲಾಖೆಯಿಂದ ಕೈಗೊಂಡ ಜಲಾನಯನ ಅಭಿವೃದ್ಧಿಗಾಗಿ ವ್ಯಯ ಮಾಡಲಾದ ಖರ್ಚು ಎಷ್ಟು? (ಯೋಜನೆವಾರು ನೀಡುವುದು)

ಆ) ಈ ಕಾಮಗಾರಿಗಳು ನಿರ್ಮಾಣವಾದ ಕೆಲವೇ ವರ್ಷಗಳಲ್ಲಿ ಸಂಪೂರ್ಣ ಶಿಥಿಲಗೊಂಡು ನಿರುಪಯುಕ್ತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದ್ದಲ್ಲಿ ತೆಗೆದುಕೊಂಡ ಕ್ರಮ ಏನು?